b) Question does not arise.

ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ಜಿಲ್ಲಾಪರಿಷತ್ತುಗಳಿಗೆ ಒದಗಿಸಲಾದ ಹಣದ ಮೊತ್ತ.

6863 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1992-93ನೇ ಸಾಲಿನಲ್ಲಿ ಜವಾಹಾರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ರಾಜ್ಯದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಒದಗಿಸಬೇಕಾಗಿದ್ದ ಹಣದ ಮೊತ್ತವೆಷ್ಟು, ಮತ್ತು ಈವರೆಗೆ ಒದಗಿಸಿದ ಹಣದ ಮೊತ್ತವೆಷ್ಟು?*

ಆ) *ಸಕಾಲಕ್ಕೆ ಸರಿಯಾಗಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಹಣ, ಬಿಡುಗಡೆ ಮಾಡದಿರುವುದಕ್ಕೆ ಕಾರಣಗಳೇನು, ವಿಳಂಬದಿಂದ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸ್ಥಗಿತ ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಇ) *ನಿಗದಿತ ಕಾಮಗಾರಿಗಳನ್ನು ಕಾರ್ಯಗತ ಮಾಡಲು ಅವಶ್ಯವಿರುವ ಹಣದ ಮೊತ್ತವೆಷ್ಟು, ಹಾಗೂ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

	೧೯೯೩-೯೪ನೇ ಸಾಲಿನಲ್ಲಿ	
	ಒದಗಿಸಬೇಕಾಗಿದ್ದ ಹಣ	*ಒದಗಿಸಿದ್ದ ಹಣ*
1. ಜಿಲ್ಲಾ ಪರಿಷತ್	4962.16	4898.31
2. ಮಂಡಲ ಪಂಚಾಯತ್	6801.16	6618.86
ಒಟ್ಟು	**11763.32**	**11517**

ಅ) ಈ ಸಾಲಿನಲ್ಲಿ ಮೊದಲನೇ ಕಂತಿನ ಹಣವನ್ನು ಏಪ್ರಿಲ್ ತಿಂಗಳಲ್ಲಿ ಎಲ್ಲಾ ಜಿಲ್ಲಾ ಪರಿಷತ್ ಡಿಆರ್‌ಡಿಎಸ್, ಬೆಂಗಳೂರುಗಳಿಗೆ ಬಿಡುಗಡೆ ಮಾಡಲಾಗಿದೆ. ತದನಂತರ, ಎರಡನೇ ಕಂತಿನ ಹಣವನ್ನು ಕೂಡ ಈ ತಿಂಗಳಲ್ಲಿ (ಡಿಸೆಂಬರ್) ಎಲ್ಲಾ ಜಿಲ್ಲಾ ಪರಿಷತ್, ಡಿಆರ್,ಡಿಎಸ್, ಬೆಂಗಳೂರುಗಳಿಗೆ ಬಿಡುಗಡೆ ಮಾಡಲಾಗಿದೆ. ಆದುದರಿಂದ ಸರ್ಕಾರವು ಹಣವನ್ನು ಸಕಾಲದಲ್ಲಿ, ಎಲ್ಲಾ ಜಿಲ್ಲಾ ಪರಿಷತ್ ಡಿಆರ್‌ಡಿಎಸ್, ಬೆಂಗಳೂರು ಗಳಿಗೆ ಬಿಡುಗಡೆ ಮಾಡಲಾಗಿದೆ.

ಇ) ನಿಗದಿತ ಕಾಮಗಾರಿಗಳನ್ನು ಕಾರ್ಯಗತ ಮಾಡಲು ಅವಶ್ಯವಿರುವ ಹಣದ ಮೊತ್ತ 11763.32 ಲಕ್ಷ ರೂ.ಗಳು.

ಈಗಾಗಲೇ 11517.17 ಲಕ್ಷ ರೂ.ಗಳನ್ನು ಎಲ್ಲಾ ಜಿಲ್ಲಾ ಪರಿಷತ್ ಡಿಆರ್‌ಡಿಎಸ್, ಬೆಂಗಳೂರು ಗಳಿಗೆ ಬಿಡುಗಡೆ ಮಾಡಲಾಗಿದೆ.